**A**

**CCE RF/RR/ PF/PR**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮಾರ್ಚ್/ಏಪ್ರಿಲ್ 2026 ರ ಪರೀಕ್ಷೆ - 1**

**MARCH/APRIL 2026 EXAMINATION - 1**

# ಮಾದರಿ ಉತ್ತರಗಳು

# MODEL ANSWERS

**ಸಂಕೇತ ಸಂಖ್ಯೆ : 33-K** **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

**ದಿನಾಂಕ : 25. 03. 2026 ]** **[ ಗರಿಷ್ಠ ಅಂಕಗಳು : 80**

**Date : 25. 03. 2026 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 1. | ಸರ್ವನಾಮ ಪದವಿದು<br>(ಎ) ಜಿಂಕೆ (ಬಿ) ವೈದ್ಯ<br>(ಸಿ) ಅವನು (ಡಿ) ಇಂದ್ರ<br>***ಉತ್ತರ :*** (ಸಿ) ಅವನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಙ, ಞ, ಣ, ನ, ಮ ಅಕ್ಷರಗಳು<br>(ಎ) ಯೋಗವಾಹಗಳು (ಬಿ) ಅಲ್ಪಪ್ರಾಣಾಕ್ಷರಗಳು<br>(ಸಿ) ಮಹಾಪ್ರಾಣಾಕ್ಷರಗಳು (ಡಿ) ಅನುನಾಸಿಕಗಳು<br>***ಉತ್ತರ :*** (ಡಿ) ಅನುನಾಸಿಕಗಳು | |
| 3. | 'ವೀರೇಶ' ಪದವು<br>(ಎ) ಸವರ್ಣದೀರ್ಘ ಸಂಧಿ (ಬಿ) ಲೋಪ ಸಂಧಿ<br>(ಸಿ) ಆಗಮ ಸಂಧಿ (ಡಿ) ಗುಣ ಸಂಧಿ<br>***ಉತ್ತರ :*** (ಡಿ) ಗುಣ ಸಂಧಿ | |
| 4. | ಕ್ರಿಯಾ ಸಮಾಸಕ್ಕೆ ಉದಾಹರಣೆ<br>(ಎ) ಗಂಜಿಯುಂಡು (ಬಿ) ನೆಲಮುಗಿಲು<br>(ಸಿ) ಸವಿಚೈತ್ರ (ಡಿ) ಹೊಂಬಾಳೆ<br>***ಉತ್ತರ :*** (ಎ) ಗಂಜಿಯುಂಡು | |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **12 × 1 = 12** |
| 5. | ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಹೇಳಿದ್ದಾರೆ ?<br>***ಉತ್ತರ :***<br>ದೇಶದ ಉದ್ಧಾರ ಸೈನಿಕ-ಸಾಹಿತಿ ಹಾಗೂ ರೈತರನ್ನು ಅವಲಂಬಿಸಿದೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಹೇಳಿದ್ದಾರೆ. | |
| 6. | ಪುಟ್ಟರಾಜರ ತಂದೆ-ತಾಯಿಗಳ ಹೆಸರೇನು ?<br>***ಉತ್ತರ :***<br>ಪುಟ್ಟರಾಜರ ತಂದೆ ರೇವಣ್ಣಯ್ಯ, ತಾಯಿ ಸಿದ್ಧಮ್ಮ. | |
| 7. | ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇರುತ್ತದೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ ಮತ್ತು ವಿಜ್ಞಾನಿಯ ತಂತ್ರಜ್ಞಾನ ಸಮನ್ವಯಗೊಂಡಿದೆ. | |
| 8. | ಹರಿದ್ವಾರದಲ್ಲಿ ಏನನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು ?<br>***ಉತ್ತರ :***<br>ಹರಿದ್ವಾರದಲ್ಲಿ ಗಂಗಾನದಿಯ ಬ್ರಹ್ಮಕುಂಡದಲ್ಲಿ ನಡೆಯುವ ಆರತಿಯನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?<br>***ಉತ್ತರ :***<br>ಬನಕ್ಕೆ ಹೋಗಿ ಗೋಪಾಲನ ಪೂಜೆಗೆ ಬೇಕಾದ ಹೂವುಗಳನ್ನು ತರುವುದು ಗೋಪಾಲನ ಬೆಳಗಿನ ಮುಖ್ಯ ಕೆಲಸವಾಗಿತ್ತು. | |
| 10. | ಸೌಜನ್ಯವು ಹೇಗೆ ಅರಳಬೇಕು ?<br>***ಉತ್ತರ :***<br>ಸೌಜನ್ಯವು ಹೂವು ಅರಳಿದಂತೆ ಅರಳಬೇಕು. | |
| 11. | ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?<br>***ಉತ್ತರ :***<br>ಯುಗಾದಿಯಲ್ಲಿ ಬೇವು-ಬೆಲ್ಲವನ್ನು ಹಂಚುವ ಸಂಪ್ರದಾಯವಿದೆ. | |
| 12. | ಕವಿ ಸಿ.ಪಿ.ಕೆ. ಅವರು ಹೇಳುವಂತೆ ತಿಮಿರಕ್ಕೆ ವೈರಿ ಯಾವುದು ?<br>***ಉತ್ತರ :***<br>ಕವಿ ಸಿ.ಪಿ.ಕೆ. ಅವರು ಹೇಳುವಂತೆ ತಿಮಿರಕ್ಕೆ ವೈರಿ ದೀಪ (ಬೆಳಕು). | |
| 13. | ಜನಪದರು ತುಂಬಿದ ಕುಣಿಗಲ್ ಕರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>***ಉತ್ತರ :***<br>ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆ ಹಣ್ಣಿಗೆ ಹೋಲಿಸಿದ್ದಾರೆ. | |
| 14. | ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು ?<br>***ಉತ್ತರ :***<br>ಬಸವಣ್ಣನವರ ಪ್ರಕಾರ ನಶಿಸುವುದು ಸ್ಥಾವರ. | |
| 15. | ಸೊನ್ನಲಿಗೆಯ ಸಿದ್ಧರಾಮರ ವಚನಗಳ ಅಂಕಿತನಾಮ ಯಾವುದು ?<br>***ಉತ್ತರ :***<br>ಸೊನ್ನಲಿಗೆ ಸಿದ್ಧರಾಮರ ವಚನಗಳ ಅಂಕಿತನಾಮ ಕಪಿಲಸಿದ್ಧ ಮಲ್ಲಿಕಾರ್ಜುನ. | |
| 16. | ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?<br>***ಉತ್ತರ :***<br>ಕೌರವನ ಸೇನೆಯು ಉತ್ತರನಿಗೆ ಸಾಗರದಂತೆ ವಿಶಾಲವಾಗಿ ಕಾಣಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳುವಂತೆ ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ? | |
| | ***ಉತ್ತರ :*** | |
| | ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳುವಂತೆ ಸೈನಿಕ ಬಲ ಇದ್ದಾಗ ದೇಶದ ಸಂರಕ್ಷಣೆ ಸಾಧ್ಯ. ಇಲ್ಲದಿದ್ದರೆ ಬೇರೆ ದೇಶದವರು ಸುಲಭವಾಗಿ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿ ಯುದ್ಧ ಸಾರಿ ನಮ್ಮನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳಬಹುದು. ಆದುದರಿಂದ ಈ ದೇಶದ ರಕ್ಷಣೆ ಮಾಡುವವರು ಸೈನಿಕರು. ಅವರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ. ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನೂ ಹೊಡೆದು ಹಾಕಿ ಸೂರ್ಯಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯಬಹುದು. ಆದುದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲ ವಾಗಿರಬೇಕು. | |
| 18. | ಹಕ್ಕಿಗಳು ಗೂಡುಗಳನ್ನು ಎಲ್ಲೆಲ್ಲಿ ಕಟ್ಟಬಲ್ಲವು ? | |
| | ***ಉತ್ತರ :*** | |
| | ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಸಾಗರದ ದ್ವೀಪ, ಗಿರಿ ಶಿಖರದ ನೆತ್ತಿ, ಮನುಷ್ಯ ನುಸುಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವಪ್ರದೇಶ – ಹೀಗೆ ಎಲ್ಲೆಲ್ಲೂ ಹಕ್ಕಿಗಳು ಗೂಡು ಕಟ್ಟಬಲ್ಲವು. | |
| 19. | ಕವಿ ಜಿ.ಎಸ್. ಶಿವರುದ್ರಪ್ಪನವರು ನಿಸರ್ಗದ ಆರಾಧನೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ ? | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಜಿ.ಎಸ್. ಶಿವರುದ್ರಪ್ಪನವರು ಬ್ರಹ್ಮಕುಂಡದ ಗಂಗಾರತಿಯನ್ನು ಕಂಡು ದೇವಸ್ಥಾನದೊಳಗೆ ನಡೆಯುವ ಪೂಜೆಯು ಸಾಂಪ್ರದಾಯಿಕ ಕಟ್ಟನ್ನು ಕಳಚಿಕೊಂಡು, ಮುಕ್ತವಾದ ನೆಲೆಗೆ ಬಂದಿದೆ ಎನ್ನುತ್ತಾರೆ. ಹರಿಯುವ ನದಿಯನ್ನೇ ದೇವರೆಂದು ಪೂಜೆ ಸಲ್ಲಿಸುವ ಮೂಲಕ ಮನುಷ್ಯ ತನ್ನ ಪ್ರಪ್ರಾಚೀನತೆಯನ್ನು ತಲುಪಿದ್ದಾನೆ. ನದಿ, ಬೆಟ್ಟ, ಬಯಲು, ಆಕಾಶ ಇವು ನಿಜವಾದ ದೇವರು. ನಾಲ್ಕು ಗೋಡೆಗಳ ನಡುವೆ ಉಸಿರುಕಟ್ಟಿಸುವ ಧೂಪ-ದೀಪ-ನೈವೇದ್ಯ ಮಂತ್ರಾದಿಗಳ ಮಧ್ಯೆ ಗರ್ಭಗುಡಿಯ ವಿಗ್ರಹವನ್ನು ದೇವರೆಂದು ಪೂಜಿಸುವುದು ಸಂಕುಚಿತವಾಗುತ್ತದೆ ಎಂದು ನಿಸರ್ಗದ ಆರಾಧನೆಯನ್ನು ಸಮರ್ಥಿಸುತ್ತಾರೆ. | |
| 20. | ಹಾ.ಮಾ. ನಾಯಕರು ಹೇಳುವಂತೆ ಸೌಜನ್ಯಶೀಲರ ಲಕ್ಷಣಗಳಾವುವು ?<br>***ಉತ್ತರ :***<br>ಹಾ.ಮಾ. ನಾಯಕರು ಹೇಳುವಂತೆ ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುದನ್ನು ತಾಳ್ಮೆಯಿಂದ ಕೇಳಬೇಕು. ಆಗುತ್ತದೋ, ಇಲ್ಲವೋ ಎಂಬುದನ್ನು ಹೇಳುವಾಗ ಮಾತಿನಲ್ಲಿ ಮೃದುತನ ಇರಬೇಕು. ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತದೆ. ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳಬೇಕು. ಸಹಾನುಭೂತಿ, ಸಹೃದಯತೆ, ಸಮಾಧಾನಗಳು ಸೌಜನ್ಯಶೀಲರ ಲಕ್ಷಣಗಳಾಗಿವೆ. | |
| 21. | ಕುಣಿಗಲ್ ಕೆರೆಯಲ್ಲಿ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?<br>***ಉತ್ತರ :***<br>ಕುಣಿಗಲ್ ಕೆರೆಯಲ್ಲಿ ಮೀನುಗಾರರು ಮೀನುಗಳನ್ನು ಹಿಡಿಯಲು ಬಲೆಗಳನ್ನು ಹಾಕುತ್ತಾರೆ. ಬಲೆಯನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳು ಒದ್ದಾಡುವ ಪರಿಯನ್ನು ಜನಪದರು ಬೊಬ್ಬೆ ಹೊಡೆದಾವೆ ಬಾಳೆಮೀನು ಎಂದು ವರ್ಣಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ ?<br><br>***ಉತ್ತರ :***<br><br>ಬಸವಣ್ಣನವರು ಉಳ್ಳವರು ಶಿವಾಲಯವನ್ನು ಕಟ್ಟುವರು ನಾನೇನು ಮಾಡಲಿ ಬಡವನಯ್ಯ ಎಂದು ಪ್ರಶ್ನಿಸುತ್ತಾರೆ. ಮುಂದುವರೆದು ನನ್ನ ಕಾಲುಗಳೇ ಕಂಬ, ದೇಹವೇ ದೇಗುಲ, ನನ್ನ ಶಿರವೇ ಹೊನ್ನ ಕಳಶವಯ್ಯ ಎನ್ನುತ್ತಾರೆ. ನಿರಾಕಾರ ಪರಮಾತ್ಮನು ನನ್ನ ಅಂತರಂಗದಲ್ಲಿದ್ದಾನೆ. ಆದ್ದರಿಂದ ಎನ್ನ ದೇಹವೇ ದೇಗುಲ ಎಂದು ಸ್ಪಷ್ಟಪಡಿಸುತ್ತಾರೆ. ಉಳ್ಳವರು ಕಟ್ಟುವ ಸ್ಥಾವರದ ದೇಗುಲಕ್ಕೆ ಅಳಿವಿದೆ. ಆದರೆ ಜಂಗಮಕ್ಕೆ ಅಳಿವಿಲ್ಲವೆಂದು ಹೇಳಿರುವುದು ಅರ್ಥಪೂರ್ಣವಾಗಿದೆ. | |
| 23. | ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆಯನ್ನು ವಿವರಿಸಿ.<br><br>***ಉತ್ತರ :***<br><br>ಕಳ್ಳರು ವೈದ್ಯರ ಮನೆಗೆ ಬಂದು ವೈದ್ಯರನ್ನು ತಮ್ಮ ಹಟ್ಟಿಗೆ ಬಂದು ಭೀಮನಾಯಕನ ಮಗನನ್ನು ಉಪಚರಿಸಬೇಕು ಎಂದು ಕೇಳಿದರು. ಇವರು ಕಳ್ಳರು ಎಂಬುದು ಗೊತ್ತಿದ್ದರೂ ಜೀವಭಯವನ್ನು ಲೆಕ್ಕಿಸದೆ ಅವರೊಂದಿಗೆ ಹೋಗಿ ಭೀಮನಾಯಕನ ಮಗನನ್ನು ಉಪಚರಿಸಿ ಅವನ ಪ್ರಾಣವನ್ನು ಉಳಿಸಿದರು. ಇದರಿಂದ ಕಳ್ಳರ ಮನಃಪರಿವರ್ತನೆಯಾಯಿತು. ಕೃತಜ್ಞತೆಯಿಂದ ವೈದ್ಯರ ಮನೆಯಿಂದ ಕಳ್ಳತನ ಮಾಡಿದ ವಸ್ತುಗಳನ್ನು ಮರಳಿ ವೈದ್ಯರಿಗೆ ಒಪ್ಪಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಡಾ. ಎಚ್.ಎಲ್. ಪುಷ್ಪ ಅವರ ಪ್ರಕಾರ ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ವಿವರಿಸಿ.<br>**ಉತ್ತರ :**<br>ಈ ಲೋಕದಲ್ಲಿ ತೆಂಗು, ಹೊಂಗೆ, ಹಿಪ್ಪೆ, ಬೇವು ಜೀವಜಾಲನೇದಿವೆ. ಇಲ್ಲಿ ಬಣ್ಣದ ಚಿಟ್ಟೆಗಳು ಹಾರಿ ಭೃಂಗದ ಸಂಗೀತ ಕೇಳಿ ಆನಂದಿಸುವಂತೆ ಹಾಗೂ ಗಮಗಮಿಸೋ ಹೂವಿನ ಗಮಲಿನಲ್ಲಿ ಅಡಗಿ ಕುಳಿತಂತೆ ಈ ಲೋಕವು ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ. | |
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | ಅ.ರಾ. ಮಿತ್ರ :<br>**ಉತ್ತರ :**<br>ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಇವರು ೧೯೩೫ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬ ಗ್ರಾಮದಲ್ಲಿ ಜನಿಸಿದರು. ಇವರು 'ಆರತಕ್ಷತೆ ಮತ್ತು ಇತರ ಪ್ರಬಂಧಗಳು', 'ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು', 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತ ಪಾತ್ರ-ಸಂಗತಿಗಳು', 'ವಚನಕಾರರು ಮತ್ತು ಶಬ್ದಕಲ್ಪ', 'ಒಳನೋಟಗಳು', 'ಕವಿಗಳ ಬೆನ್ನೇರಿ', 'ಕೈಲಾಸಂ ಬದುಕು-ಬರಹ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಗೊರೂರು ಸಾಹಿತ್ಯ ಹಾಗೂ ಧರ್ಮಶ್ರೀ ನಗೆರಾಜ ಪ್ರಶಸ್ತಿಗಳು ಸಂದಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **V.** | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು<br>ಜಗಕೆಲ್ಲ ಹೊಸ ಕಳೆಯು ತುಂಬಿತೆಂತು !<br>ಬಗೆ ಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ<br>ನೆಲದಮ್ಮ ನವವಧುವೆ ಆದಳಿಂತು !<br>***ಉತ್ತರ :***<br>ಈ ಪದ್ಯಭಾಗವನ್ನು ಬಸವರಾಜ ಸಾದರ ಅವರ 'ಸಿಸಿಫಸರ ಸುತ್ತು' ಕವನಸಂಕಲನದ 'ಸವಿಚೈತ್ರ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>ಪ್ರಸ್ತುತ ಪದ್ಯಭಾಗವು ಚೈತ್ರಮಾಸದಲ್ಲಿ ಬರುವ ಯುಗಾದಿಯ ಮಹತ್ವವನ್ನು ತಿಳಿಸುತ್ತದೆ. ವಸಂತ ಋತುವಿನಲ್ಲಿ ಬರುವ ಚೈತ್ರಮಾಸವು ಪ್ರಕೃತಿಯಲ್ಲಿ ಅನೇಕ ಬದಲಾವಣೆಗಳನ್ನು ತರುತ್ತದೆ. ಎಲ್ಲಾ ಜೀವಿಗಳಲ್ಲಿ ನವಚೈತನ್ಯವನ್ನು ತಂದು ಜಗದ ಹೊಸ ಕಳೆಯನ್ನು ತುಂಬುತ್ತದೆ. ಗಿಡಮರಗಳು ಹೊಸ ಚಿಗುರಿನಿಂದ, ಬಣ್ಣಬಣ್ಣದ ಹೂವುಗಳಿಂದ ಕಂಗೊಳಿಸುತ್ತವೆ. ಇದನ್ನು ಕವಿ ನೆಲದಮ್ಮ ಮದುವಣಗಿತ್ತಿಯಂತೆ ಸಿಂಗಾರಗೊಂಡಿದ್ದಾಳೆ ಎಂದು ಹೇಳುತ್ತಾರೆ. ಚೈತ್ರಮಾಸದಲ್ಲಿ ಪ್ರಕೃತಿಯಲ್ಲುಂಟಾಗುವ ಬದಲಾವಣೆಯನ್ನು ಕವಿ ಇಲ್ಲಿ ಮನೋಜ್ಞವಾಗಿ ವರ್ಣಿಸಿದ್ದಾರೆ. | |
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಕುಣಿಗಲ್ ಕೆರೆಯು ಬಾಳೆಯ ಹಣ್ಣಿನಂತೆ ಬಾಗಿದೆ."<br>***ಉತ್ತರ :***<br>*ಅಲಂಕಾರದ ಹೆಸರು :* ಉಪಮಾಲಂಕಾರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ. | |
| | ಉಪಮೇಯ : ಕುಣಿಗಲ್ ಕೆರೆ | |
| | ಉಪಮಾನ : ಬಾಳೆಯ ಹಣ್ಣು | |
| | ಉಪಮಾವಾಚಕ : ಅಂತೆ | |
| | ಸಮಾನಧರ್ಮ : ಬಾಗಿರುವುದು | |
| | ಸಮನ್ವಯ : ಈ ವಾಕ್ಯದಲ್ಲಿ 'ಕುಣಿಗಲ್ ಕೆರೆ' ಎಂಬ ಉಪಮೇಯವನ್ನು 'ಬಾಳೆಯ ಹಣ್ಣು' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ 'ಬಾಗಿರುವುದು' ರೀತಿಯನ್ನು ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ. | |
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಬೆಳೆಯುವ ಸಿರಿ ಮೊಳಕೆಯಲ್ಲಿ | |
| | **ಅಥವಾ** | |
| | ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ | |
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **5 × 3 = 15** |
| | ಕೃತಿ, ಕರ್ತೃ ಮತ್ತು ಪದ್ಯದ ಹೆಸರು | 1 ಅಂಕ |
| | ಯಾರು-ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 29. | "ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು."<br>***ಉತ್ತರ :***<br>ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಅವರು ಬರೆದಿರುವ 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಜೀವನಚರಿತ್ರೆಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಲೇಖಕರು ಗುರು-ಶಿಷ್ಯರ ಸಂಬಂಧವನ್ನು ತಿಳಿಸುವಾಗ ಹೇಳಿದ್ದಾರೆ. ಪಂಚಾಕ್ಷರ ಗವಾಯಿಗಳ ಶಿಷ್ಯತ್ವವನ್ನು ಸ್ವೀಕರಿಸಿದ ಪುಟ್ಟಯ್ಯ "ಪಂಚಾಕ್ಷರ ಗುರುಗಳನ್ನು ಅನುಸರಿಸಬೇಕು ಅವರ ನಡೆಯೇ ನನಗೆ ಆಚಾರವಾಗಬೇಕು" ಎಂದು ನಿರ್ಧರಿದ. ತನ್ನ ಎಲ್ಲಾ ಸಹಪಾಠಿಗಳಿಗಿಂತ ಬಲುಬೇಗ ಗುರುಗಳು ಹೇಳಿದ್ದನ್ನು ಗ್ರಹಿಸಿ ಕಲಿತುಕೊಂಡರು ಗುರುಶಿಷ್ಯರೀರ್ವರೂ ಅಂಧರಾಗಿದ್ದರು. ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು. ಈ ಮಾತಿನಲ್ಲಿ ಗುರುಶಿಷ್ಯರ ನಡುವಿನ ಅವಿನಾಭಾವ ಸಂಬಂಧ ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ. | |
| 30. | "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ."<br>***ಉತ್ತರ :***<br>ಈ ವಾಕ್ಯವನ್ನು ಡಾ. ಗುರುರಾಜ ಕರ್ಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಪುಸ್ತಕದಿಂದ ಆಯ್ದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ನಿವೃತ್ತ ಹೆಡ್ ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ವಿದ್ಯಾರ್ಥಿಗಳು ಕಾಫೀ ಕುಡಿದ ನಂತರ ಗುರುಗಳೊಂದಿಗೆ ಬದುಕಿನ ತೊಂದರೆಗಳನ್ನು ಕುರಿತು ಮಾತನಾಡುತ್ತಾರೆ. ಆಗ ಗುರುಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | "ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫಿ ಮಾತ್ರ. ಕಪ್ಪುಗಳನ್ನಲ್ಲ. ಅವನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ, ಅಲಂಕಾರಗಳ ಬೆನ್ನತ್ತಿ ಓಡಿಓಡಿ ಜೀವನವನ್ನು ಮರೆಯಬೇಡಿ" ಎಂದು ಹೇಳುತ್ತಾರೆ. ಗುರುಗಳು ವಿದ್ಯಾರ್ಥಿಗಳಿಗೆ ಕಾಫೀ-ಕಪ್ಪುಗಳ ನಿದರ್ಶನ ನೀಡುತ್ತಾ ಜೀವನದ ಪಾಠ ಹೇಳಿರುವುದು ಇಲ್ಲಿ ಸ್ವಾರಸ್ಯಕರವಾಗಿದೆ. | |
| 31. | "ಅಮ್ಮನ ಮಾತು ಸುಳ್ಳಾಗಲಾರದು."<br>***ಉತ್ತರ :***<br>ಈ ವಾಕ್ಯವನ್ನು ಕುವೆಂಪುರವರು ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿ ಕೊಳ್ಳಲಾಗಿದೆ.<br>ಈ ಮಾತನ್ನು ಗೋಪಾಲನು ಹೇಳುತ್ತಾನೆ. "ಸಂಜೆ ಶಾಲೆಯಿಂದ ಕಾಡನ್ನು ದಾಟಿ ಮನೆಗೆ ಬರುವಾಗ ನಿನಗೆ ಹೆದರಿಕೆಯಾದರೆ ನಿನ್ನ ಅಣ್ಣ ಗೋಪಾಲನನ್ನು ಕರೆ; ಅವನು ಬಂದು ಕಾಡು ದಾಟಿಸುತ್ತಾನೆ." ಎಂದು ಅಮ್ಮ ಮಗ ಗೋಪಾಲನಿಗೆ ಹೇಳಿದ್ದಳು. ಸಂಜೆ ಶಾಲೆಯಿಂದ ಮನೆಗೆ ಮರಳುವಾಗ ಕಾಡಿನ ದಾರಿಯಲ್ಲಿ ಹೆದರಿಕೆಯಾಗುತ್ತದೆ. ಅಮ್ಮ ಹೇಳಿದ ಮಾತನ್ನು ನೆನಪಿಸಿಕೊಂಡು ಗೋಪಾಲನು ಬನದ ಗೋಪಾಲನನ್ನು ಕೂಗಿ ಕರೆಯುತ್ತಾನೆ. ಆಗ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ. ಅಮ್ಮ ಹೇಳಿದ ಮಾತು ಸುಳ್ಳಾಗಲಾರದು ಎಂದುಕೊಂಡು ಮತ್ತೊಮ್ಮೆ ಕೂಗುತ್ತಾನೆ. ಆಗ ಬನದ ಗೋಪಾಲನಿಂದ ಪ್ರತಿಕ್ರಿಯೆ ಬರುತ್ತದೆ. ಇಲ್ಲಿ ಗೋಪಾಲನಿಗೆ ತನ್ನ ತಾಯಿಯ ಮಾತಿನ ಮೇಲಿರುವ ನಂಬಿಕೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 32. | "ಸಿಡುಕು ಮಿಡುಕನು ತೊರೆದು ಮೌನಿಯಾಗು."<br>*ಉತ್ತರ :*<br>ಈ ವಾಕ್ಯವನ್ನು ಸಿ.ಪಿ. ಕೃಷ್ಣಕುಮಾರ್ ಅವರು ರಚಿಸಿದ 'ಬೊಗಸೆ' ಕವನಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿಗಳು ಹೇಳಿದ್ದಾರೆ. ಮಾನವ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ತನ್ನದಾದ ಕರ್ತವ್ಯಗಳನ್ನು ಮೌನವಾಗಿ ಮಾಡಿ ಮುಗಿಸಬೇಕು. ಕೂಗಾಟ ಹಾರಾಟದಿಂದ ಯಾವ ಫಲವೂ ಇಲ್ಲ. ಹಸಿಸೌದೆ ಬುಸುಗುಟ್ಟಿ ದನಿಯನ್ನು ಎತ್ತುತ್ತದೆ. ತನ್ನ ಕರ್ತವ್ಯವನ್ನು ಪೂರೈಸುವುದಿಲ್ಲ. ಮದ್ದು ಕಿಡಿಸೋಕಿದ ತಕ್ಷಣ ಸಿಡಿದು ಅಬ್ಬರಿಸಿ ನಾಶವಾಗುತ್ತದೆ. ಹೀಗಿರದೆ ಸೂರ್ಯ ಕಿರಣಗಳಿಗೆ ಕರಗುವ ಇಬ್ಬನಿಯಂತೆ ನಮ್ಮ ಕರ್ತವ್ಯಗಳನ್ನು ಮೌನದಲ್ಲಿ ಮಾಡಿ ಮುಗಿಸಬೇಕು. ಸಿಡುಕು ಮಿಡುಕನ್ನು ತೊರೆಯಬೇಕು ಎಂದು ಕವಿ ಸಂದೇಶ ನೀಡಿದ್ದಾರೆ. ಇಲ್ಲಿ ಸಾರ್ಥಕ ಜೀವನದ ಮೌಲ್ಯ ಅಭಿವ್ಯಕ್ತಗೊಂಡಿದೆ. | |
| 33. | "ಎಮ್ಮರಮನೆಯ ನಾರಿಯರೆ ಸಾಕು."<br>*ಉತ್ತರ :*<br>ಈ ವಾಕ್ಯವನ್ನು ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಉತ್ತರಕುಮಾರನು ಅರ್ಜುನನಿಗೆ ಹೇಳುತ್ತಾನೆ. ಜೀವಭಯದಿಂದ ಉತ್ತರಕುಮಾರ ಯುದ್ಧ ಮಾಡಲು ಒಪ್ಪದಿದ್ದಾಗ ಅರ್ಜುನನು ಉತ್ತರನಿಗೆ ಹಲವು ಆಮಿಷಗಳನ್ನು ಒಡ್ಡುತ್ತಾನೆ. ಅದಕ್ಕೆ ಉತ್ತರನು "ಧುರಕ್ಕೆ ಬೆನ್ನು ಹಾಕಿದ್ದರಿಂದ ಬರುವ ಪಾಪವನ್ನು ಭೂಸುರರಿಂದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅಶ್ವಮೇಧಯಾಗ ಮಾಡಿಸಿ ಕಳೆದುಕೊಳ್ಳುತ್ತೇನೆ. ನನಗೆ ಸುರರ ಸತಿಯರು ಬೇಕಿಲ್ಲ ನಮ್ಮ ಅರಮನೆಯ ನಾರಿಯರೇ ಸಾಕು. ನಮ್ಮ ಅರಸುತನವೇ ನಮಗೆ ಇಂದ್ರಪದವಿ ನನ್ನನ್ನು ಬಿಟ್ಟು ಬಿಡು" ಎಂದು ಹೇಳುತ್ತಾನೆ. ಇಲ್ಲಿ ಉತ್ತರಕುಮಾರನು ನಗೆಪಾಟಲಿಗೆ ಒಳಗಾಗುವ ಪ್ರಸಂಗ ಹಾಸ್ಯಮಯವಾಗಿ ಅಭಿವ್ಯಕ್ತಗೊಂಡಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :** **(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 34. | ಏಕಾಂಗಿ ವೀರನಂತೆ ............................................<br>.................................................................<br>.................................................................<br>............................................. ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ..................................................<br>.................................................................<br>.................................................................<br>................................. ಮಹಾಬೆಳಕೊಂದು ಕಂಡಿತು<br>***ಉತ್ತರ :***<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| X. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ. | |
| | **ಅಥವಾ** | |
| | ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ಕವಿ ಗೋಪಾಲಕೃಷ್ಣ ಅಡಿಗರು ಹೇಳುವಂತೆ ಜೀವನದಲ್ಲಿ ಒಂದೇ ಒಂದು ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ನಾವು ಇಟ್ಟುಕೊಂಡ ಗುರಿ ನಮಗೂ, ದೇಶಕ್ಕೂ ಹಾಗೂ ಸಮಾಜಕ್ಕೂ ಒಳ್ಳೆಯದನ್ನು ಬಯಸುವಂತಿರಬೇಕು. ಸ್ವಾರ್ಥಿಗಳಾಗಬಾರದು, ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು. ಇದುವೇ ಮನುಷ್ಯ ಜೀವನ. ಕಮಲದ ಹೂ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದಳವನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿಸೇರಿ ಜೀವನ ಸಾರ್ಥಕ ಮಾಡಿಕೊಳ್ಳುತ್ತದೆ. ಹಾಗೆಯೇ ಮಾನವನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತನ್ನ ಕೀಳರಿಮೆಯನ್ನು ತೊರೆದು ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಹೇಳಿದ್ದಾರೆ. | |
| | **ಅಥವಾ** | |
| | ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು. ಆಗ ಜೀವನ ಸಾರ್ಥಕವಾಗುತ್ತದೆ. ಕಮಲ ಕೆಸರೊಳಗೆ ಹುಟ್ಟಿದ್ದರೂ ದೇವರ ಮುಡಿಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿಕಿರಣಗಳ ಸಿರಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಠವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ಸಾಧಿಸುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮವಿರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೆ ಏಕೆ ಹಲವು ಗುರಿಗಳು ಬೇಕು ? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ನರದೊಳಗೆ ನಾರಾಯಣನ ರೂಪವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ, ಪರಹಿತ ಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದ್ದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XI. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4**<br>**( 2 + 2 )** |
| 36. | ಒಂದು ಬಾರಿ ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣಕಟ್ಟಿ ಸ್ನೇಹಿತರನ್ನು ನೋಡಿಕೊಂಡು ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ ಆದರೂ ಬೆಳದಿಂಗಳ ದಿನ; ಸ್ವಲ್ಪ ದೊಡ್ಡ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಯೋಚಿಸುತ್ತಾ ಬೇಗಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು.<br><br>ರಸ್ತೆಗೆ ಸ್ವಲ್ಪದೂರದ ಗುಹೆಯಲ್ಲಿ ಮಲಗಿದ್ದ ಹುಲಿ ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಒಂದೆರಡು ಬಾರಿ ಮೈಮುರಿದು ಹೊರಟಿತು. ರಸ್ತೆಯ ಬಳಿ ಬಂದಾಗ ಶಾನುಭೋಗರನ್ನು ಕಂಡಿತು. ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆಯೊಂದಿತ್ತು. ಶಾನುಭೋಗರು ಹುಲಿಗೆ ಅಭಿಮುಖವಾಗಿರದೆ ಅದರ ಕಡೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೇ , ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವೆಂದು ಅರಿತಿದ್ದವು. ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಅಭಿಮುಖವಾಗಿ ಬರಬೇಕು ಅಂದುಕೊಂಡಿತು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ ನಿಶ್ಯಬ್ದವಾಗಿ ಅವರ ಹಿಂದೆಯೆ ನಡೆಯಿತು. ನಂತರ ಅವರ ಮುಂಭಾಗಕ್ಕೆ ನೆಗೆದು ತಿರುಗಿ ಮೇಲೆ ಬೀಳಬೇಕು ಎಂದುಕೊಂಡು ತನ್ನ ದೇಹವನ್ನು ಬೆಕ್ಕಿನಂತೆ ಹುದುಗಿಸಿಕೊಂಡು ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು. ಇಲ್ಲಿ ಹುಲಿಯ ಧರ್ಮಶ್ರದ್ಧೆ ಮೆಚ್ಚುವಂತದ್ದಾಗಿದೆ.<br><br>***ಪ್ರಶ್ನೆಗಳು:***<br><br>ಅ) ಹುಲಿ ತನ್ನ ದೇಹವನ್ನು ಬೆಕ್ಕಿನಂತೆ ಹುದುಗಿಸಿಕೊಳ್ಳಲು ಕಾರಣವೇನು ?<br><br>ಆ) ಚಿಕ್ಕನಾಯಕನಹಳ್ಳಿಯಿಂದ ವಾಪಸ್ಸು ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?<br><br>***ಉತ್ತರ :***<br><br>ಅ) ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು ಅಂದುಕೊಂಡಿತು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ ನಿಶ್ಯಬ್ದವಾಗಿ ಅವರ ಹಿಂದೆಯೇ ನಡೆಯಿತು. ನಂತರ ಅವರ ಮುಂಭಾಗಕ್ಕೆ ನೆಗೆದು ತಿರುಗಿ ಮೇಲೆ ಬೀಳಬೇಕು ಎಂದುಕೊಂಡು ತನ್ನ ದೇಹವನ್ನು ಬೆಕ್ಕಿನಂತೆ ಹುದುಗಿಸಿಕೊಂಡು ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.<br><br>ಆ) ಶಾನುಭೋಗರು ಚಿಕ್ಕನಾಯಕನಹಳ್ಳಿಗೆ ಹೋಗಿ ಖಜಾನೆಗೆ ಹಣಕಟ್ಟಿ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ ಬೆಳದಿಂಗಳ ದಿನ ಸ್ವಲ್ಪ ದೊಡ್ಡ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಯೋಚಿಸುತ್ತಾ ಬೇಗಬೇಗ ನಡೆದರು. | |
| **XII.** | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಮತದಾನದ ಮಹತ್ವ<br>**ಅಥವಾ**<br>ನನ್ನ ಕುಟುಂಬ | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಕಾರವಾರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವಿನಯ' ಎಂದು ಭಾವಿಸಿಕೊಂಡು, ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಎರಡು ಬಸ್ಸುಗಳನ್ನು ಒದಗಿಸುವಂತೆ ಕ.ರಾ.ರ.ಸಾ. ಸಂಸ್ಥೆಯ ಡಿಪೋ ಮ್ಯಾನೇಜರ್‌ರವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಂಜುಂ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕರ್ನಾಟಕ ರಾಜ್ಯೋತ್ಸವ' ಕಾರ್ಯಕ್ರಮ ಕುರಿತು ಶಿವಮೊಗ್ಗ ಸರ್ಕಾರ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಗುಲ್ನಾಜ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |